ನೋಡಿ ಜೈನ ಮುನಿಗಳ ಮನಸ್ಸು ಕರಗಿತು. ಅವುಗಳನ್ನು ರಕ್ಷಿಸುವ ಉದ್ದೇಶದಿಂದ 'ಪಕ್ಷಿಗಳ ಆಸ್ಪತ್ರೆ' ತೆಗೆಯುವಂತೆ ಅವರು ತಮ್ಮ ಭಕ್ತರಿಗೆ ಕರೆ ನೀಡಿದರು.

ಜೈನಧರ್ಮೀಯರು ತಮ್ಮ ದಾನ ನೀಡುವ ಗುಣದಿಂದಾಗಿಯೇ ಈ ವಿಶೇಷ ಆಸ್ಪತ್ರೆಯನ್ನು ತೊಂಬತ್ತೈದು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದ್ದಾರೆ. ಮೊದಲಿಗೆ ಸಣ್ಣ ಕೋಣೆಯಲ್ಲಿ ಆಚಾರ್ಯರ ಆದೇಶದಂತೆ ಪ್ರಾರಂಭವಾದ ಈ ಸೇವಾ ಆಸ್ಪತ್ರೆ ನಂತರ ಕೆಂಪು ಕೋಟೆ ಬಳಿ ಇರುವ ದಿಗಂಬರ ಜೈನ ಬಸದಿಯ ಆವರಣದಲ್ಲಿ ಮೂರು ಅಂತಸ್ತಿನಲ್ಲಿ ಹರಡಿಕೊಂಡಿದೆ.

ಗಾಯಗೊಂಡ ಪಕ್ಷಿಗಳು ಹಾಗೂ ಮೊಲಗಳನ್ನು ಆರೈಕೆ ಮಾಡುವ ಉದ್ದೇಶಕ್ಕಾಗಿ ಮೊದಲು ಪ್ರಾರಂಭಗೊಂಡರೂ ನಂತರದ ದಿನಗಳಲ್ಲಿ ಈ ಚಾರಿಟಿ ಆಸ್ಪತ್ರೆಗೆ ಅಧಿಕ ಸಂಖ್ಯೆಯಲ್ಲಿ ಜರ್ಜರಿತವಾದ ಪಕ್ಷಿಗಳು ಬರಲು ಪ್ರಾರಂಭಿಸಿದವು. ಇವುಗಳನ್ನು ಪರೀಕ್ಷಿಸಿ ಚಿಕಿತ್ಸೆ ನೀಡಲು ನುರಿತ ವೈದ್ಯರನ್ನೊಳಗೊಂಡ ತಂಡವೇ ಇಲ್ಲಿದೆ. ದೆಹಲಿಯ ಸುತ್ತಮುತ್ತ ಗಾಯಗೊಂಡ ಹಕ್ಕಿಗಳನ್ನು ಕರೆತಂದಾಗ ಕೂಲಂಕಷವಾಗಿ ತಪಾಸಣೆ ನಡೆಸಿ, ಅವುಗಳಿಗೆ ಬೇಕಾದಂತಹ ಚಿಕಿತ್ಸೆ ನೀಡಿ ಗುಣಮುಖವಾಗುವವರೆಗೆ ಆಸ್ಪತ್ರೆಯಲ್ಲಿಯೇ ಶುಶ್ರೂಷೆ ನೀಡಿ, ನಂತರ ಆ ಪಕ್ಷಿಗಳನ್ನು ಸ್ವತಂತ್ರವಾಗಿ ಹಾರಾಡಲು ಬಿಟ್ಟುಬಿಡುತ್ತಾರೆ.

ಇಲ್ಲಿ ಸದಾ ಗಿಜಿಗುಡುವಷ್ಟು ಪಕ್ಷಿಗಳು ಇರುತ್ತವೆ. ಅವುಗಳಲ್ಲಿ ಪಾರಿವಾಳಗಳ ಸಂಖ್ಯೆಯೇ ಅಧಿಕ. ಸಾರ್ವಜನಿಕ ಸ್ಥಳಗಳಲ್ಲಿ ಕಾಳುಗಳನ್ನು ಹಾಕುವ ಮೂಲಕ ಅವುಗಳ ಪ್ರಾಣಕ್ಕೆ ಸಂಚಕಾರ ತರಲಾಗುತ್ತದೆ. ವೇಗವಾಗಿ ಹೋಗುವ ವಾಹನಗಳಿಗೆ ಸಿಲುಕಿ ಅವುಗಳು ಅಪಘಾತಕ್ಕೆ ಒಳಗಾಗುತ್ತವೆ ಇಲ್ಲವೇ ಸಾವನ್ನಪ್ಪುತ್ತವೆ. ಅಪಘಾತಕ್ಕೆ ತುತ್ತಾದ ಪಕ್ಷಿಗಳನ್ನು ಇಲ್ಲಿಗೆ ತಂದು ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸೆಯ ಸಂದರ್ಭದಲ್ಲಿ ಅವುಗಳಿಗೆ ನೀಡಬೇಕಾದ ಆಹಾರದ ಬಗ್ಗೆ ಅತ್ಯಂತ ಕಾಳಜಿ ವಹಿಸಲಾಗುತ್ತದೆ. ಇಲ್ಲಿ ಗಿಳಿಗಳು, ಗುಬ್ಬಚ್ಚಿಗಳು, ನವಿಲುಗಳು ಕೂಡ ಚಿಕಿತ್ಸೆ ಪಡೆಯುತ್ತಿವೆ. ವಿಚಿತ್ರವೆಂದರೆ ಕಾಗೆಗಳೂ, ಗೂಬೆಗಳೂ ಚಿಕಿತ್ಸೆಗಾಗಿ ಬರುತ್ತವೆ. ಅವುಗಳಿಗಾಗಿ ಸುಸಜ್ಜಿತ ಗೂಡುಗಳಿವೆ. ಸಿಬ್ಬಂದಿಯ ಅನುಕೂಲಕ್ಕಾಗಿ ಆ ಗೂಡುಗಳಿಗೆ ಸಂಖ್ಯೆಯನ್ನು ನೀಡಲಾಗಿದೆ.


ಗಾಯಗೊಂಡ ಪಾರಿವಾಳಕ್ಕೆ ಚಿಕಿತ್ಸೆ–ಕಾಳಜಿಯ ಸಾಂತ್ವನ




ಪ್ರತಿದಿನ 40ಕ್ಕೂ ಅಧಿಕ ಪಕ್ಷಿಗಳನ್ನು ಇಲ್ಲಿಗೆ ಚಿಕಿತ್ಸೆಗಾಗಿ ತರಲಾಗುತ್ತದೆ. ಅದಕ್ಕಾಗಿ ಆಸ್ಪತ್ರೆಯಲ್ಲಿ ಹೊರ ರೋಗಿ ತಪಾಸಣೆ ಹಾಗೂ ತೀವ್ರ ನಿಗಾ ಘಟಕದ (ಐಸಿಯು) ಸೌಲಭ್ಯವೂ ಇದೆ. ಪಕ್ಷಿಪ್ರಿಯರು ತಮ್ಮ ಖುಷಿಗಾಗಿ ಸಾಕುವ ಪಕ್ಷಿಗಳು ರೋಗಪೀಡಿತವಾದರೆ, ಆಹಾರ ಸೇವಿಸದಿದ್ದರೆ, ಇಲ್ಲಿಗೆ ತಂದು ಚಿಕಿತ್ಸೆ ಕೊಡಿಸಿಕೊಂಡು ಹೋಗುತ್ತಾರೆ. ಯಾವ ಚಿಕಿತ್ಸೆಗೂ ಇಲ್ಲಿ ಹಣ ನೀಡಬೇಕಿಲ್ಲ. ಒಂದೊಮ್ಮೆ ಆಪರೇಶನ್ ಮಾಡಬೇಕಾಗಿ ಬಂದರೂ ಅದು ಸಂಪೂರ್ಣ ಉಚಿತ.

ಮನುಷ್ಯರಂತೆ ಪಕ್ಷಿಗಳ ಆರೋಗ್ಯದ ಮೇಲೂ ಪರಿಸರ ಮಾಲಿನ್ಯ ಪರಿಣಾಮ ಬೀರುತ್ತಿದೆ. ದೀಪಾವಳಿ ಸಂದರ್ಭದಲ್ಲಿ ಆಸ್ಪತ್ರೆಗೆ ಬರುವ ಪಕ್ಷಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಅದಕ್ಕೆ ಕಾರಣ, ಪಟಾಕಿ. ಹಬ್ಬದ ಸಂದರ್ಭದಲ್ಲಿ ಹಚ್ಚುವ ಪಟಾಕಿಗಳ ಶಬ್ದದಿಂದ ಪಕ್ಷಿಗಳು ಆಘಾತಕ್ಕೆ ಒಳಗಾಗುತ್ತವೆ. ಉಸಿರಾಟದ ತೊಂದರೆ ಅನುಭವಿಸುತ್ತವೆ. ಕಲುಷಿತ ಹೊಗೆ ಪಕ್ಷಿಗಳ ಆರೋಗ್ಯದ ಮೇಲೆ ಹಲವು ರೀತಿಯ ಪರಿಣಾಮ ಬೀರುತ್ತವೆ. ಅನಾರೋಗ್ಯದಿಂದ ಬಳಲುವ ಎಲ್ಲ ಪಕ್ಷಿಗಳಿಗೂ ಮುಕ್ತವಾಗಿ ಚಿಕಿತ್ಸೆ ನೀಡಿ ಆರೈಕೆ ಮಾಡಲಾಗುತ್ತದೆ. ಗುಣಮುಖವಾದ ನಂತರ ಅವುಗಳ ಪ್ರಾಕೃತಿಕ ನೆಲೆಗೆ ಮತ್ತೆ ಕಳುಹಿಸುವ ಮೂಲಕ ಸ್ವತಂತ್ರಗೊಳಿಸಲಾಗುತ್ತದೆ.

'ನೀನು ಬದುಕು, ಇತರರನ್ನೂ ಬದುಕಲು ಬಿಡು' ಎನ್ನುವ ಮೂಲಕ ಈ ಜಗತ್ತಿನಲ್ಲಿ ಹುಟ್ಟಿದ ಪ್ರತಿ ಜೀವಿಗೂ ನಿನ್ನಂತೆಯೇ ಬದುಕುವ ಹಕ್ಕಿದೆ ಎಂದು ಜೈನಧರ್ಮ ಪ್ರತಿಪಾದಿಸಿತು. ಅಂತಹ ಜೈನಧರ್ಮದ ಮಹಾನ್ ತತ್ವದ ತಳಹದಿಯ ಮೇಲೆಯೇ ಈ ಚಿಕಿತ್ಸಾಲಯ ಮುನ್ನಡೆಯುತ್ತಿದೆ.

'ಪ್ರತಿಯೊಬ್ಬರೂ ಶಾಶ್ವತ ಶಾಂತಿಗೆ ಹಂಬಲಿಸುತ್ತ ಆನಂದವಾಗಿ ಬದುಕಲು ಇಚ್ಛಿಸುತ್ತಾರೆ. ನೋವು, ದುಃಖ, ಸಂಕಟ ಯಾರಿಗೂ ಬೇಕಾಗಿಲ್ಲ. ಪ್ರತಿಯೊಂದು ಜೀವಿಗೂ ಬದುಕಲು ಇಷ್ಟ. ಸಾವು ಯಾರಿಗೂ ಬೇಡ. ಆದ್ದರಿಂದ ಪ್ರತಿಯೊಂದು ಜೀವಿಗೂ ಬದುಕಲು ಸಹಾಯ ಮಾಡಿ' ಎನ್ನುವುದು ಮಹಾವೀರರ ಉತ್ಕೃಷ್ಟ ಚಿಂತನೆ. ಇಂತಹ ಚಿಂತನೆಗೆ ಸಾಕಾರ ನೀಡುವಲ್ಲಿ ಶತಮಾನದ ಅಂಚಿನಲ್ಲಿರುವ ಈ ಪಕ್ಷಿ ಆಸ್ಪತ್ರೆ ಕಾರ್ಯನಿರತವಾಗಿದೆ. ದೆಹಲಿಗೆ ಭೇಟಿ ನೀಡಿದಾಗ ಮರೆಯದೆ ನೋಡಬೇಕಾದ ಸ್ಥಳವಿದು.

ಪ್ರತಿಕ್ರಿಯಿಸಿ: feedback@sudha.co.in